# ಚಾಮರಾಜನಗರ ಜಿಲ್ಲಾ ಮಾಹಿತಿ

1. ಜಿಲ್ಲೆಯ ವೈಶಿಷ್ಟ್ಯ
2. ಚಾಮರಾಜನಗರದ ಇತಿಹಾಸ
3. ಗುಂಡ್ಲುಪೇಟೆ ಇತಿಹಾಸ
4. ಕೊಳ್ಳೇಗಾಲ ಇತಿಹಾಸ
5. ಯಳಂದೂರು ಇತಿಹಾಸ
6. ಹವಾಗುಣ ಮತ್ತು ಮಳೆ
7. ನೀರಾವರಿ
8. ಕೃಷಿ
9. ಭೂ ಉಪಯೋಗ
10. ಬೆಳೆ ಪದ್ಧತಿ : ಚಾ.ನಗರ, ಗುಂಡ್ಲುಪೇಟೆ, ಕೊಳ್ಳೇಗಾಲ
11. ಜಿಲ್ಲೆಯ ಗಡಿ ಭಾಗದಲ್ಲಿರುವ ಜಿಲ್ಲೆಗಳು
12. ಜಿಲ್ಲೆಯಲ್ಲಿ ಹರಿಯುವ ಪ್ರಮುಖ ನದಿಗಳು
13. ಜಿಲ್ಲೆಯ ಆಡಳಿತ ವಿಭಾಗ
14. ಚಾ.ನಗರ ಜಿಲ್ಲೆಯಲ್ಲಿರುವ ವಿವಿಧ ಪ್ರೇಕ್ಷಣೀಯ ಸ್ಥಳಗಳ ವಿವರ
15. ಪೊಲೀಸ್ ಠಾಣೆಗಳು ಮತ್ತು ಉಪಠಾಣೆಗಳು
16. ಚಾ.ನಗರ ಜಿಲ್ಲೆಯಲ್ಲಿರುವ ಪ್ರಮುಖ ರಸ್ತೆಗಳ ವಿವರ ( ರಾಷ್ಟ್ರೀಯ , ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆಗಳು )
17. ಚಾ.ನಗರ ಜಿಲ್ಲೆಯಲ್ಲಿರುವ ಪ್ರಮುಖ ಅರಣ್ಯ ಪ್ರದೇಶಗಳ ವಿವರ
18. ಚಾ.ನಗರ ಜಿಲ್ಲೆಯಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ವಿವರ
19. ಚಾ.ನಗರ ಜಿಲ್ಲೆಯಲ್ಲಿರುವ ಖಾಸಗಿ ಪದವಿ ಪೂರ್ವ ಕಾಲೇಜುಗಳ ವಿವರ
20. ಚಾ.ನಗರ ಜಿಲ್ಲೆಯಲ್ಲಿರುವ ಸರ್ಕಾರಿ ಕಾರ್ಖಾನೆಗಳ ವಿವರ
21. ಚಾ.ನಗರ ಜಿಲ್ಲೆಯಲ್ಲಿರುವ ಖಾಸಗಿ ಕಾರ್ಖಾನೆಗಳ ವಿವರ
22. ಜಿಲ್ಲೆಯಲ್ಲಿರುವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ವಿವರ

23.ಜಿಲ್ಲೆಯಲ್ಲಿರುವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ವಿದ್ಯಾರ್ಥಿಗಳ ವಿವರ

24.ಜಿಲ್ಲೆಯಲ್ಲಿರುವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಶಿಕ್ಷಕರ ವಿವರ

25.ಚಾ.ನಗರ ಜಿಲ್ಲೆಯಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಆಸ್ಪತೆಗಳ ವಿವರ

26.ಚಾ.ನಗರ ಜಿಲ್ಲೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಿವರ

27.ಚಾ.ನಗರ ಜಿಲ್ಲೆಯಲ್ಲಿರುವ ಪೆಟ್ರೋಲ್ ಬಂಕ್‌ಗಳ ವಿವರ

28.ಚಾ.ನಗರ ಜಿಲ್ಲೆಯಲ್ಲಿರುವ ವಸತಿ ಗೃಹಗಳ ವಿವರ

29.ಚಾ.ನಗರ ಜಿಲ್ಲೆಯಲ್ಲಿರುವ ಗ್ರಾಮಗಳ ಸಂಖ್ಯೆ

30.ಜನಸಂಖ್ಯೆ ಮತ್ತು ವಿಸ್ತೀರ್ಣ

31.ಚಾ.ನಗರ ಜಿಲ್ಲೆಯಲ್ಲಿರುವ ರಾಜಕೀಯ ಸೂಕ್ಷ್ಮತೆವುಳ್ಳ ಗ್ರಾಮಗಳು

32.ಚುನಾವಣೆ 2008 ರ ಮತಗಟ್ಟೆಗಳು ಹಾಘೂ ಮತದಾರರ ವಿವರ.

33.ಚುನಾವಣೆ 2008 ರ ಸೂಕ್ಷ್ಮ, ಅತಿಸೂಕ್ಷ್ಮ, ಸಾಮಾನ್ಯ ಮತಗಟ್ಟೆಗಳ ವಿವರ

34.ಚಾಮರಾಜನಗರ ಜಿಲ್ಲೆಯಲ್ಲಿರುವ ಜಾತಿವಾರು ಜನಸಂಖ್ಯೆ ವಿವರ

35.ಚಾಮರಾಜನಗರ ಜಿಲ್ಲೆಯ ಹೋಬಳಿಗಳು ಮತ್ತು ಹೋಬಳಿಗಳಿಗೆ ಸೇರಿರುವ ಗ್ರಾಮಗಳ ವಿವರ

36.ಚಾಮರಾಜನಗರ ಜಿಲ್ಲೆಯ ತಾಲ್ಲೂಕು ಪಂಚಾಯ್ತಿಗೆ ಸೇರಿರುವ ಗ್ರಾಮಗಳ ವಿವರ

37.ಚಾಮರಾಜನಗರ ಜಿಲ್ಲೆಯ ಜಿಲ್ಲಾ ಪಂಚಾಯ್ತಿಗೆ ಸೇರಿರುವ ಗ್ರಾಮಗಳ ವಿವರ

38.ಜಿಲ್ಲಾ ಪಂಚಾಯ್ತಿ ಮತಕ್ಷೇತ್ರಗಳ ಕ್ಷೇತ್ರವಾರು ಮತದಾರರ ವಿವರ

39.ಲೋಕಸಭಾ ಮತ್ತು ವಿಧಾನಸಭೆಗೆ 1972 ರಿಂದ 2004 ರ ವರೆವಿಗೆ ಆಯ್ಕೆಯಾದ ಸದಸ್ಯರುಗಳ ಹೆಸರು ಮತ್ತು ಪಡೆದ ಮತಗಳ ವಿವರ

40. ಚಾಮರಾಜನಗರ ಜಿಲ್ಲೆಯ ಚರ್ಚ್‌ಗಳ ವಿವರ

**ಚಾಮರಾಜನಗರ ಜಿಲ್ಲಾ ಆರ್ಥಿಕ ಮತ್ತು ಸಾಮಾಜಿಕ ಅವಲೋಕನ :**

**ಜಿಲ್ಲೆಯ ವೈಶಿಷ್ಟ್ಯ :**

ಕರ್ನಾಟಕ ರಾಜ್ಯದ ದಕ್ಷಿಣದ ತುತ್ತ ತುದಿಯಲ್ಲಿರುವ ಚಾಮರಾಜನಗರ ಜಿಲ್ಲೆಯ ಇತಿಹಾಸದ ಮಟ್ಟದಲ್ಲಿ ತನ್ನದೆ ಆದ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಈ ಜಿಲ್ಲೆ 1997 ನೇ ಸಾಲಿನಲ್ಲಿ ಹೊಸದಾಗಿ ಕರ್ನಾಟಕ ರಾಜ್ಯದಲ್ಲಿ ಸ್ಥಾಪಿತವಾದ 7 ಜಿಲ್ಲೆಗಳಲ್ಲಿ ಒಂದು ಜಿಲ್ಲೆ. ಜಿಲ್ಲೆಯು ರೇಷ್ಮೆ, ಶ್ರೀಗಂಧ ಹಾಗೂ ಅರಣ್ಯ ಉತ್ಪನ್ನಗಳಿಗೆ ಹೆಸರುವಾಸಿಯಾಗಿದೆ. ಸುವರ್ಣಾವತಿ ಮತ್ತು ಚಿಕ್ಕಹೊಳೆ, ಕಾವೇರಿ ನದಿಗೆ ಈ ಜಿಲ್ಲೆಯು ಉಪ ನದಿಗಳಾಗಿವೆ.

ಈ ಹಿಂದೆ ಚಾಮರಾಜನಗರ ಮೈಸೂರು ಜಿಲ್ಲೆಗೆ ಸೇರಿತ್ತು. ದಿನಾಂಕ 15-08-1997 ರಂದು ಚಾಮರಾಜನಗರವನ್ನು ಪ್ರತ್ಯೇಕ ಜಿಲ್ಲೆಯನ್ನಾಗಿ ಘೋಷಿಸಿ ಅಸ್ತಿತ್ವಕ್ಕೆ ತರಲಾಯಿತು. ಈ ಹಿಂದೆ ಮೈಸೂರು ಜಿಲ್ಲೆಯು ಗುಂಡ್ಲುಪೇಟೆ, ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ, ಮೈಸೂರು, ನಂಜನಗೂಡು, ಹುಣಸೂರು, ಪಿರಿಯಾಪಟ್ಟಣ, ಕೆ.ಆರ್.ನಗರ, ಹೆಚ್.ಡಿ.ಕೋಟೆ ಮತ್ತು ಟೀ.ನರಸೀಪುರ ತಾಲ್ಲೂಕುಗಳನ್ನು ಒಳಗೊಂಡಿತ್ತು.

ಚಾಮರಾಜನಗರವನ್ನು ಜಿಲ್ಲೆಯಾಗಿ ಘೋಷಿಸಿದ ನಂತರ ಮೈಸೂರು ಜಿಲ್ಲೆಯಲ್ಲಿದ್ದ ಗುಂಡ್ಲುಪೇಟೆ, ಕೊಳ್ಳೇಗಾಲ, ಯಳಂದೂರು ತಾಲ್ಲೂಕುಗಳನ್ನೊಳಗೊಂಡಂತೆ ಚಾಮರಾಜನಗರವನ್ನು ಜಿಲ್ಲೆಯನ್ನಾಗಿ ಮಾಡಲಾಯಿತು. ಹೀಗಾಗಿ ಈ ಹಿಂದೆ 11 ತಾಲ್ಲೂಕುಗಳನ್ನು ಒಳಗೊಂಡಿದ್ದಂತಹ ಮೈಸೂರು ಜಿಲ್ಲೆ ಹಾಲಿ 7 ತಾಲ್ಲೂಕುಗಳನ್ನೂ ಚಾಮರಾಜನಗರ ಜಿಲ್ಲೆಯೂ 4 ತಾಲ್ಲೂಕುಗಳನ್ನೂ ಒಳಗೊಂಡಿದೆ.

**ಚಾಮರಾಜನಗರದ ಇತಿಹಾಸ :**

ಈ ಪ್ರದೇಶವನ್ನು ಹಿಂದೆ ಗಂಗರು ಕಲ್ಯಾಣದ ಚಾಲುಕ್ಯರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರು ಮತ್ತು ಉಮ್ಮತ್ತೂರು ನಂದ್ಯಾಲ ಕಳಲೆಯ ಮುಖ್ಯಸ್ಥರು ಆಳಿದ್ದಾರೆ. ಈ ವಿಧವಾದ ಅರಸು ಮನೆತನಗಳಿಗೆ ಸೇರಿದ ಅರಸರು. ಕ್ರಿ.ಸ. 8ನೇ ಶತಮಾನದಿಂದ 1950 ರವರಗೆ ಈ ತಾಲ್ಲೋಕಿನ ಆಡಳಿತವನ್ನು ನಡೆಸಿದ್ದಾರೆ. ಈ ತಾಲ್ಲೋಕಿನಲ್ಲಿ ಇದುವರೆಗೆ 410 ಶಾಸನಗಳು ದೊರೆತಿವೆ. ಹೊಯ್ಸಳ ದೊರೆ ವಿಷ್ಣುವರ್ದನನ ಸೇನಾಧಿಕಾರಿಗಿದ್ದ ಪುಗಸೆ ಇಲ್ಲ 1117 ರಲ್ಲಿ ಜೈನ ಬಸ್ತಿಯೊಂದನ್ನು ಕಟ್ಟಿಸಿದವನು. ಚೋಳರನ್ನು ಹೆಸರಿಸಿ ನೀಲಗಿರಿಯನ್ನು ಒಳಪಡಿಸಿಕೊಂಡು ಈ ಸುತ್ತನೆಲ್ಲಾ ಆಳಿದನೆಂದು ತಿಂದು ಬಂದಿರುತ್ತದೆ.

ಚಾಮರಾಜನಗರಕ್ಕೆ ಹಿಂದೆ ಅರಿಕುಠಾರ ಎಂಬ ಹೆಸರಿತ್ತು ಒಡೆಯನೂರು ಎಂದೂ ಸಹ ಕರೆಯಲಾಗುತ್ತಿತ್ತು, 9ನೇ ಚಾಮರಾಜ ಒಡೆಯರು ಕ್ರಿ. ಶ. 1774-1796 ಮೈಸೂರನ್ನಾಳಿದ ಒಡೆಯರ ಪೈಕಿ 9ನೇ ಖಾಸಾ ಚಾಮರಾಜ ಒಡೆಯರು ಅವರು ಕ್ರಿ. ಶ. 1774 ರಲ್ಲಿ ಇಲ್ಲ ಖಾಸಾ ಜನಿಸಿದರು. ಸ್ಮರಣಾರ್ಥ ಅವರ ಜನಸಿದ ಸ್ಥಳದಲ್ಲಿ ನಗರದ ಮಧ್ಯ ಭಾಗದಲ್ಲಿ ಜನನ ಮಂಟಪವನ್ನು ನಿರ್ಮಿಸಲಾಗಿದೆ. ಈಗ ಈ ಕಟ್ಟಡವು ಪುರಾತನ ಸಂರಕ್ಷಣಾ ಸ್ಮಾರಕವೆಂದು ಸರ್ಕಾರ ಘೋಷಿಸಿದೆ. ಮುಮ್ಮಡಿ ಕೃಷ್ಣರಾಜ ಒಡೆಯರು ಕ್ರಿ. ಶ. 1794-1863 ಚಾಮರಾಜ ಒಡೆಯರ ನಂತರ ತಮ್ಮ ತಂದೆಯ ಜನ್ಮ ಸ್ಥಳವಾದ ಈ ಊರನ್ನು ಹೊಸದಾಗಿ ಕಟ್ಟಿಸಿ ಕ್ರಿ.ಶ. 1818ರಲ್ಲಿ ಚಾಮರಾಜನಗರವೆಂದು ನಾಮಕಾರಣ ಮಾಡಿದರು. ಇಲ್ಲಿ ಭವ್ಯವಾದ ಶ್ರೀ ಚಾಮರಾಜೇಶ್ವರ ದೇವಾಲಯವನ್ನು 1826 ರಲ್ಲಿ ನಿರ್ಮಿಸಿದರು. ಅಷಾಡ ಮಾಸದಲ್ಲಿ ಇಲ್ಲಿ ಮಹಾರಥೋತ್ಸವ ಇಂದಿಗೂ ವೈಭವವಾಗಿ ನಡೆಯುತ್ತಿದೆ.

ದೇವಸ್ಥಾನಗಳು : ಚಾಮರಾಜನಗರ ಪಟ್ಟದಲ್ಲಿರುವ ದೇವಾಲಗಳೆಂದರೆ ಭುಜಂಗೇಶ್ವರ, ವೀರಭದ್ರನಗುಡಿ, ಕಾಡು ನಾರಾಯಣಸ್ವಾಮಿ, ಚೌಡೇಶ್ವರಿ, ಕನ್ನಿಕಾ ಪರಮೇಶ್ವರಿ, ಇತ್ಯಾದಿ ಖಾಸಗಿ ಬಸ್ ನಿಲ್ದಾಣದಲ್ಲಿ ಮಾರಿಗುಡಿ, ಸಂಪಿಗೆ ರಸ್ತೆಯಲ್ಲಿ ಶ್ರೀಕಂಠೇಶ್ವರ ಸಂತೇಮರಹಳ್ಳಿ ರಸ್ತೆಯಲ್ಲಿ ಮಂಟೇಸ್ವಾಮಿ, ಹಾಗೂ ಪುಟ್ಟಮ್ಮಣ್ಣಿ ದೇವಸ್ಥಾನಗಳು ಇದೆ. ಇಲ್ಲಿನ ಪಾರ್ಶನಾಥ ಬಸದಿ ಬಹಳ ಪುರಾತನವಾದದು. ಪಟ್ಟಣದ ದಕ್ಷಿಣ ಭಾಗದಲ್ಲಿ ಕರಿವರದರಾಜಸ್ವಾಮಿ ಬೆಟ್ಟವು ಇರುತ್ತದೆ.

ಕಂಠೀರವ ನರಸರಾಜ ಒಡೆಯರು ಕ್ರಿ.ಶ. 1638–59) ರವರು ದೊಡ್ಡ ಅರಸಿನ ಕೊಳವನ್ನು ಕಟ್ಟಿಸಿದ್ದು, ಇದು ಬಹುಕಾಲದವರೆಗು ನಗರದ ಜನತೆಗೆ ಕುಡಿಯುವ ನೀರನ್ನು ಒದಗಿಸುತ್ತಿತ್ತು. ಈ ಐತಿಹಾಸಿಕ ಕೊಳವನ್ನು ಸ್ವಲ್ಪ ಮಟ್ಟಿಗೆ ಈಗ ಅಭಿವೃದ್ದಿ ಪಡಿಸಿರುತ್ತಾರೆ. ದೊಡ್ಡರಸನ ಕೊಳದ ಗಣಪತಿಯು ಮಹಾಮನ್ವಿತವೆಂದು ಪ್ರತೀತ.

ಇಲ್ಲಿಯ ಮುಖ್ಯ ನದಿ ಹೊನ್ನುಹೊಳೆ ಅಥವಾ ಸುವರ್ಣಾವತಿ. ಇದು ದಕ್ಷಿಣ ಗಡಿಯ ಆಚೆ ನೀಲಗಿರಿ ಬೆಟ್ಟ ಸಾಲಿನಲ್ಲಿ ದಂಬಂ ಎಂಬಲ್ಲಿ ಹುಟ್ಟಿ ಈಶಾನ್ಯಾಭಿಮುಖವಾಗಿ ಹರಿದು ರಾಮಸಮುದ್ರ ಮತ್ತು ಆಲೂರುಗಳನ್ನು ದಾಟಿ ಯಳಂದೂರಿನತ್ತ ಸಾಗುತ್ತದೆ. ಚಿಕ್ಕಹೊಳೆ ಇದರ ಉಪ ನದಿ. ಸಂತೇಮರಳ್ಳಿ ಹೋಬಳಿಯ ಕೆಲಭಾಗ ಕಬಿನಿ ಅಣೆಕಟ್ಟಿನ ಬಲದಂಡೆ ನಾಲೆಯ ಅಚ್ಚುಕಟ್ಟಿಗೆ ಸೇರಿರುತ್ತದೆ. ಬಂಡೀಪುರ ಮತ್ತು ಬಿಳಿಗಿರಿ ರಂಗನ ಬೆಟ್ಟದ ಕಾಡುಗಳಲ್ಲಿ ಆನೆಗಳ ಹಿಂಡುಗಳುಂಟು. ಇದಲ್ಲದೆ ಚಿರತೆ, ಹುಲಿ, ಕಾಡುಕೋಣ, ಜಿಂಕೆ ಹಲವಾರು ಬಗೆಯ ಹಾವುಗಳು ಇವೆ.

ಬಿಳಿಗಿರಿ ರಂಗನಬೆಟ್ಟದ ಪ್ರದೇಶ ಚಾರ್ನೋಕೈಟ್ ಶಿಲೆಗಳದು. ತಾಲ್ಲೂಕಿನ ಇತರೆ ಭಾಗದಲ್ಲಿ ಕಣಶಿಲೆಯೇ ತಳಶಿಲೆ. ತಾಲ್ಲೂಕಿನಲ್ಲಿ ಕಪ್ಪು ಮತ್ತು ಕೆಂಪು ಮಣ್ಣಿನಿಂದ ಹಿಡಿದು ನುರುಜು ಮಿಶ್ರಿತ ಮಣ್ಣಿನ ಭೂಮಿ ಇದ್ದು ಸಾಮಾನ್ಯವಾಗಿ ಫಲವತ್ತಾಗಿದೆ. ಸುವರ್ಣಾವತಿ ಜೌಳು ಮಣ್ಣು ವಿಶೇಷವಾಗಿದೆ. ತಾಲ್ಲೂಕಿನ ಪಶ್ಚಿಮ ಭಾಗದ ನೆಲ ಹೆಚ್ಚು ಸಾರವತ್ತಾದ್ದಲ್ಲ. ಪೂರ್ವಕ್ಕೆ ಸಾಗಿದಂತೆ ಮಣ್ಣಿನ ಗುಣ ಅಧಿಕ. ಹೊನ್ನುಹೊಳೆ ಕಣವೆಯ ಮಣ್ಣು ತುಂಬಾ ಉತ್ತಮ. ಸುವರ್ಣಾವತಿಗೆ ಅಟ್ಟುಗುಳಿಪುರದ ಬಳಿ ಕಟ್ಟೆ ಕಟ್ಟಲಾಗಿದೆ. 26 ಮೀಟರ್ ಎತ್ತರವಿರುವ ಈ ಕಟ್ಟೆಯ ಉದ್ದ ಸುಮಾರು 1158 ಮೀಟರ್, ಇದರ ಬಲನಾಲೆಯ ಉದ್ದ 23 ಕಿ.ಮೀ ಎಡನಾಲೆ 6 1/2 ಕಿ.ಮೀ 1971 ರಿಂದ ನೀರಾವರಿಗೆ ಬಳಸಿಕೊಳ್ಳಲಾಗುತ್ತಿರುವ ಇದರ ಒಟ್ಟು ಅಚ್ಚುಕಟ್ಟು 1700 ಎಕರೆ. ಇದರಲ್ಲಿ ನೇರ ಅಚ್ಚುಕಟ್ಟು 7000 ಎಕರೆ. ಕೊಯಮತ್ತೂರು ಜಿಲ್ಲೆಯಲ್ಲಿ ಹುಟ್ಟಿ ಚಾಮರಾಜನಗರ ತಾಲ್ಲೂಕಿನಲ್ಲಿ ಸುವರ್ಣಾವತಿಯನ್ನು ಸೇರುವ ಚಿಕ್ಕಹೊಳೆಗೆ ಈ ತಾಲ್ಲೂಕಿನಲ್ಲಿ ಸುವರ್ಣಾವತಿ ಕಟ್ಟೆಯಿಂದ ಕೆಳಕ್ಕೆ 8 ಕಿ.ಮೀ ದೂರದಲ್ಲಿ ಒಂದು ಮಧ್ಯಮ ವರ್ಗದ ಕಟ್ಟೆ ಕಟ್ಟಲಾಗಿದೆ. ಇವಲ್ಲದೆ ತಾಲ್ಲೂಕಿನಲ್ಲಿ ನೀರಾವರಿಗೆ ಅನುಕೂಲವಾದ ಹಲವು ಕೆರೆಗಳುಂಟು. ತಾಲ್ಲೂಕಿನ ವಾರ್ಷಿಕ ಸರಾಸರಿ ಮಳೆ 667.59 ಮಿ.ಮೀ

ಚಾಮರಾಜನಗರ ಮೈಸೂರು ರೈಲ್ವೆ ಮಾರ್ಗವಿದ್ದು ಮುಂದೆ ಅದನ್ನು ವಿಸ್ತರಿಸುವ ಯೋಜನೆ ಇದೆ. ಅಮಚವಾಡಿ, ಬಾಗಳಿ, ಬದನಗುಪ್ಪೆ, ಚಂದಕವಾಡಿ, ಹಣಗನೂರು, ಹೊಂಗನೂರು, ಹರದನಹಳ್ಳಿ, ಹರವೆ, ಜ್ಯೋತಿಗೌಡನಪುರ, ಕಾಗಲವಾಡಿ, ಕೊತ್ತಲವಾಡಿ, ಕಡಲೂರು, ಕದೇರು, ಮಂಗಲ, ನಾಗವಳ್ಳಿ, ರಾಮಸಮುದ್ರ, ಸರಗೂರು, ಸಂತೇಮರಳ್ಳಿ, ತಮ್ಮಡಹಳ್ಳಿ, ಉಮ್ಮತ್ತೂರು ಗ್ರಾಮಗಳು ಈ ತಾಲ್ಲೂಕಿನ ದೊಡ್ಡ ಗ್ರಾಮಗಳು, ಸಂತೇಮರಳ್ಳಿಯ ಸಂತೆ ಪ್ರಸಿದ್ದವಾದದ್ದು.

**ಗುಂಡ್ಲುಪೇಟೆ :**

ಗುಂಡ್ಲುಪೇಟೆ ತಾಲ್ಲೂಕಿನ ದಕ್ಷಿಣ ಹಾಗೂ ಪಶ್ಚಿಮ ಭಾಗ ಅರಣ್ಯ ಮತ್ತು ಬೆಟ್ಟಗುಡ್ಡಗಳಿಂದ ಆವೃತವಾಗಿದೆ. ಬಂಡೀಪುರ ಮತ್ತು ಬೇರಂಬಾಡಿ ರಕ್ಷಿತ ಅರಣ್ಯಗಳಾಗಿವೆ. ಈ ತಾಲ್ಲೂಕಿನ ಪೂರ್ವ ಮತ್ತು ಉತ್ತರ ಭಾಗಗಳಲ್ಲಿ ಜನವಸತಿ ಹೆಚ್ಚು. ಈ ಜನವಸತಿ ಪ್ರದೇಶಗಳು ಮತ್ತು ಅರಣ್ಯಗಳ ನಡುವೆ ತಾಲ್ಲೂಕಿನ ಪಶ್ಚಿಮ ಮತ್ತು ದಕ್ಷಿಣ ಮೇರೆಗಳಿಗೆ ಸಮಾನಾಂತರವಾಗಿ ಹಬ್ಬಿರುವ ಒಂದು ಬೆಟ್ಟದ ಸಾಲಿದೆ. ಎರಡು ದಿಕ್ಕುಗಳ ಈ ಬೆಟ್ಟದ ಹರವುಗಳು ಗೋಪಾಲಸ್ವಾಮಿ ಬೆಟ್ಟದಲ್ಲಿ ಸಂಧಿಸುತ್ತವೆ. ತಾಲ್ಲೂಕಿನ ದಕ್ಷಿಣ ಗಡಿಯಲ್ಲಿ ಮಾಯಾರ್ ನದಿ ಹರಿಯುತ್ತದೆ. ಇದೇ ಕರ್ನಾಟಕ ಮತ್ತು ತಮಿಳುನಾಡಿನ ಈ ಭಾಗದ ಗಡಿರೇಖೆ. ಮುಖ್ಯ ನದಿಯೆಂದರೆ ಗುಂಡ್ಲುಹೊಳೆ. ಈ ನದಿ ತಾಲ್ಲೂಕಿನ ಮಧ್ಯದಲ್ಲಿ ದಕ್ಷಿಣದಿಂದ ಉತ್ತರಕ್ಕೆ ಹರಿಯುತ್ತದೆ. ಮುಂದೆ ನಂಜನಗೂಡಿನಲ್ಲಿ ಕಪಿಲಾ ನದಿಯನ್ನು ಸೇರುತ್ತದೆ. ತಾಲ್ಲೂಕಿನಲ್ಲಿ ಎರೆಮಣ್ಣು ಇದೆ. ಹೆಚು ಭಾಗ ನುರುಜು ಭೂಮಿ, ಮಳೆ ಕಡಿಮೆ. ಗುಂಡ್ಲುಹೊಳೆಯ ಎಡದಂಡೆಯ ಮೇಲಿರುವ ಈ ಊರು ಮೈಸೂರು–ಉದಕಮಂಡಲ(ಊಟಿ) ಹೆದ್ದಾರಿಯಲ್ಲಿ ಮೈಸೂರಿನ ದಕ್ಷಿಣಕ್ಕೆ 31 ಕಿ.ಮೀ ದೂರದಲ್ಲಿದೆ. ಗುಂಡ್ಲುಪೇಟೆಯಿಂದ ಪೂರ್ವಕ್ಕೆ 32 ಕಿ.ಮೀ ದೂರದಲ್ಲಿ ಚಾಮರಾಜನಗರವಿದೆ. ಪಶ್ಚಿಮಕ್ಕೆ ಕೇರಳದ ಸುಲ್ತಾನ್ ಬತ್ತೇರಿ ಮತ್ತು ಮುಂದೆ ಕಣ್ಣಾನೂರಿಗೆ ಮತ್ತು ವಾಯುವ್ಯ ದಿಕ್ಕಿನಲ್ಲಿ ಹೆಚ್.ಡಿ.ಕೋಟೆ ಕಡೆಗೆ ಹೋಗಲು ರಸ್ತೆಗಳಿವೆ.

**ಕೊಳ್ಳೇಗಾಲ :**

ಕೊಳ್ಳೇಗಾಲ ತಾಲ್ಲೂಕು ಪ್ರಾಕೃತಿಕವಾಗಿ ಮೈಸೂರು ಪ್ರಸ್ಥಭೂಮಿಯ ಒಂದು ಭಾಗ, ಅದರ ಆಗ್ನೇಯ ಅಂಚಿನಲ್ಲಿದೆ. ತಾಲ್ಲೂಕಿನ ಪೂರ್ವ ಮತ್ತು ದಕ್ಷಿಣ ಭಾಗಗಳಲ್ಲಿ ಪೂರ್ವ ಘಟ್ಟಗಳ ದಕ್ಷಿಣದ ಕವಲುಗಳು ಹರಿದಿವೆ. ಪೂರ್ವದಲ್ಲಿರುವ ಬೆಟ್ಟಗಳಲ್ಲಿ ಮಹದೇಶ್ವರಬೆಟ್ಟ ಶ್ರೇಣಿ ಪ್ರಸಿದ್ಧವಾದುದು. ಪಶ್ಚಿಮದಲ್ಲಿ ಬಿಳಿಗಿರಿ ರಂಗನಬೆಟ್ಟದ ಶ್ರೇಣಿ ಇದೆ. ತಾಲ್ಲೂಕಿನ ವಾಯುವ್ಯ, ಉತ್ತರ, ಪೂರ್ವದ ಅಂಚುಗಳಲ್ಲಿ ಕಾವೇರಿ ನದಿ ಹರಿಯುತ್ತದೆ. ಇದೇ ಈ ಭಾಗದ ಗಡಿರೇಖೆ ಕೂಡಾ. ಕಾವೇರಿ ನದಿಯ ಗಗನಚುಕ್ಕಿ ಮತ್ತು ಭರಚುಕ್ಕಿ ಜಲಪಾತಗಳು ಈ ತಾಲ್ಲೂಕಿನ ವಾಯುವ್ಯ ಭಾಗದಲ್ಲಿವೆ. ಆಗ್ನೇಯ ಗಡಿಯಲ್ಲಿ ಪಾಲಾರ್ ಎಂಬ ಚಿಕ್ಕ ನದಿ ಇದೆ. ಚಾಮರಾಜನಗರ–ಯಳಂದೂರು ತಾಲ್ಲೂಕುಗಳಿಂದ ಬರುವ ಸುವರ್ಣಾವತಿ ಕೊಳ್ಳೇಗಾಲದಿಂದ ಸ್ವಲ್ಪ ದೂರದಲ್ಲಿ ಕಾವೇರಿ ನದಿಯನ್ನು ಸೇರುತ್ತದೆ. ಬಿಳಿಗಿರಿ ರಂಗನಬೆಟ್ಟದಿಂದ ಬರುವ ಗುಂಡ್ಲುಹೊಳೆ ಕೊಳ್ಳೇಗಾಲದಿಂದ 3 ಕಿ.ಮೀ ಉತ್ತರದಲ್ಲಿ ಕಾವೇರಿ ನದಿ ಸೇರುತ್ತದೆ. ಬಿಳಿಗಿರಿರಂಗನಬೆಟ್ಟ ಮತ್ತು ಮಹದೇಶ್ವರ ಬೆಟ್ಟಗಳ ನಡುವೆ ತಗ್ಗು ಪ್ರದೇಶವಿದೆ. ಇಲ್ಲಿ ಹರಿಯುವ ಉಲಿಕೊಪ್ಪಹಳ್ಳ, ತಟ್ಟಿಹಳ್ಳ, ಉಡುತೊರೆಹಳ್ಳವನ್ನು ಕೂಡಿ ಈಶಾನ್ಯಾಭಿಮುಖವಾಗಿ ಹರಿದು ಕಾವೇರಿ ನದಿಯನ್ನು ಸೇರುತ್ತವೆ. ಮಹದೇಶ್ವರಬೆಟ್ಟದಿಂದ ಗಿಲ್ಲಿಗುಳಿಹಳ್ಳ, ಗುಳಿನಾಲಾಗಳು ಉತ್ತರಾಭಿಮುಖವಾಗಿ ಹರಿದು ಕಾವೇರಿಯನ್ನು ಸೇರುತ್ತವೆ. ಮಹದೇಶ್ವರಬೆಟ್ಟದ ಪೂರ್ವದಲ್ಲಿ ಪೂರ್ವಾಭಿಮುಖವಾಗಿ ಹರಿದು ಕಾವೇರಿಯನ್ನು ಸೇರುವ ಗುಳಿಯಾತನೂರುಹಳ್ಳ ಮತ್ತು ಯೇಲಕ್ಕಿಯಾತಹಳ್ಳಗಳಿವೆ. ಆಗ್ನೇಯದಲ್ಲಿ ಮೆದುಗನಾಳಹಳ್ಳ ಪಾಲಾರ್ ನದಿಯನ್ನು ಸೇರುತ್ತದೆ. ಇಲ್ಲಿಯ ವಾಯುಗುಣ ಮೈಸೂರು ಜಿಲ್ಲೆಯ ಇತರೆ ಭಾಗಗಳಲ್ಲಿರುವಂತೆ ಮಳೆಯ ವಾರ್ಷಿಕ ಸರಾಸರಿ 791.03 ಮಿ.ಮೀ. ಕಬಿನಿ ಅಣೆಕಟ್ಟಿನ ಬಲದಂಡೆ ನಾಲೆಯ ಅಚ್ಚುಕಟ್ಟಿನಲ್ಲಿ ಕೊಳ್ಳೇಗಾಲ ಮತ್ತು ಪಾಳ್ಯ ಹೋಬಳಿಯ ಬಹುಭಾಗ ನೀರಾವರಿಗೆ ಒಳಗಾಗಿದೆ. ತಾಲ್ಲೂಕಿನ ಸುಮಾರು ಅರ್ಧ ಭಾಗ ಕಾಡುಗಳಿಂದ ಕೂಡಿದೆ. ಬೆಟ್ಟದ ಪ್ರದೇಶಗಳಲ್ಲಿ ದಟ್ಟವಾದ ಕಾಡುಗಳಿವೆ. ಕೊಳ್ಳೇಗಾಲದಿಂದ ಲೊಕ್ಕನಹಳ್ಳಿ, ಬೈಲೂರು ಮೂಲಕ ಸಾಗುವ ಸತ್ಯಮಂಗಲ ರಸ್ತೆ,, ಹನೂರು, ಅಜ್ಜಿಪುರ ಮೂಲಕ ಹೋಗುವ ಭವಾನಿ ರಸ್ತೆ ಮುಖ್ಯವಾದವು. ಕೊಳ್ಳೇಗಾಲದಿಂದ ಮಹದೇಶ್ವರಬೆಟ್ಟಕ್ಕೆ ಉತ್ತಮ ರಸ್ತೆ ಮಾಡಲಾಗಿದೆ.

**ಯಳಂದೂರು :**

ಯಳಂದೂರು ಚಾಮರಾಜನಗರ ಜಿಲ್ಲೆಯ ಅತ್ಯಂತ ಚಿಕ್ಕ ತಾಲ್ಲೂಕು. ಉತ್ತರ ಮತ್ತು ಪೂರ್ವದಲ್ಲಿ ಕೊಳ್ಳೇಗಾಲ ತಾಲ್ಲೂಕು ಮತ್ತು ಪಶ್ಚಿಮ ಮತ್ತು ದಕ್ಷಿಣಕ್ಕೆ ಚಾಮರಾಜನಗರ ತಾಲ್ಲೂಕು ಸುತ್ತುವರೆದಿದೆ. ಯಳಂದೂರು ಹೆಚ್ಚಿನ ಪ್ರದೇಶ ಸಮತಟ್ಟಾಗಿದ್ದು, ವ್ಯವಸಾಯ ಯೋಗ್ಯ ಮರಳು ಮಿಶ್ರಿತ ಕೆಂಪು ಮಣ್ಣು

ಮತ್ತು ಕಪ್ಪು ಮಣ್ಣಿನ ಭೂ ಪ್ರದೇಶವನ್ನೊಳಗೊಂಡಿದೆ. ಈ ತಾಲ್ಲೂಕಿನಲ್ಲಿ 2700 ಹೆಕ್ಟೇರ್ ಭೂಮಿ ವ್ಯವಸಾಯಕ್ಕೆ ಉಪಯೋಗವಾಗುತ್ತಿದ್ದು 7751 ಹೆಕ್ಟೇರ್ ವ್ಯವಸಾಯವಾಗದ ಭೂಮಿ ಇದೆ. ದಕ್ಷಿಣ ಭಾಗ ಬಿಳಿಗಿರಿ ರಂಗನಬೆಟ್ಟದ ಸಾಲಿನ ದಟ್ಟ ಕಾಡುಗಳಿಂದ ಕೂಡಿದ್ದರೆ, ಉತ್ತರ ಭಾಗ ಸುವರ್ಣಾವತಿ ನದಿ ಮತ್ತು ಕೆರೆಗಳು ಕೂಡಿದ ಪ್ರದೇಶವಾಗಿದೆ. ಒಟ್ಟಿನಲ್ಲಿ ತಾಲ್ಲೂಕು ತಂಪಾದ ಹವಾಗುಣ ಹೊಂದಿದೆ. ವಾರ್ಷಿಕ ಮಳೆ 779 ಮಿ.ಮೀ. ಈ ತಾಲ್ಲೂಕಿನಲ್ಲಿ 10772 ಹೆಕ್ಟೇರ್ ಕಾಡು ಪ್ರದೇಶವಿದೆ. ಈ ತಾಲ್ಲೂಕಿಗೆ ಸೇರಿರುವ ಬಿಳಿಗಿರಿ ರಂಗನಬೆಟ್ಟದ ಸಾಲು ಉತ್ತರ ದಕ್ಷಿಣವಾಗಿ ಹಬ್ಬಿದೆ. ಈ ಬೆಟ್ಟ ದಟ್ಟವಾದ ಕಾಡಿನಿಂದ ಆವೃತವಾಗಿದ್ದು ಕಾಡಿನಲ್ಲಿ ತೇಗ, ಹೊನ್ನೆ, ಮತ್ತಿ, ಬೀಟೆ, ಕಲ್ಲುಸಾಗಿ ಇತ್ಯಾದಿ ಮರಗಳು ಬೆಳೆದಿವೆ. ಈ ಕಾಡಿನಲ್ಲಿ ಆನೆ, ಕಾಡುಕೋಣ, ಚಿರತೆ, ಜಿಂಕೆ, ಕರಡಿ, ಮೊದಲಾದ ವನ್ಯಮೃಗಗಳು ಇವೆ. ಸುವರ್ಣಾವತಿ ಈ ತಾಲ್ಲೂಕಿನ ಮುಖ್ಯ ನದಿ. ಈ ನದಿ ತಾಲ್ಲೂಕನ್ನು ಅಂಬಳೆ ಗ್ರಾಮದ ಪಶ್ಚಿಮದಲ್ಲಿ ಪ್ರವೇಶಿಸಿ ನೈರುತ್ಯದಿಂದ ಯಳಂದೂರು ಮೂಲಕ ಈಶಾನ್ಯದಲ್ಲಿ ಕೊಳ್ಳೇಗಾಲ ತಾಲ್ಲೂಕನ್ನು ಪ್ರವೇಶಿಸುತ್ತದೆ. ಈ ನದಿ ಮತ್ತು ಕೆಲವು ಕೆರೆಗಳು ತಾಲ್ಲೂಕಿನ ವ್ಯವಸಾಯಕ್ಕೆ ಅನುಕೂಲವಾಗಿದೆ. ಯಳಂದೂರು ಮಾರ್ಗದಿಂದ ಹೋಗುವ ನಂಜನಗೂಡು–ಕೊಳ್ಳೇಗಾಲ ರಸ್ತೆ, ಚಾಮರಾಜನಗರ–ಯಳಂದೂರು ರಸ್ತೆ ಇವು ತಾಲ್ಲೂಕಿನ ಪ್ರಮುಖ ರಸ್ತೆಗಳು. ಯಳಂದೂರಿಗೆ 19 ಕಿ.ಮೀ ದೂರದಲ್ಲಿರುವ ಚಾಮರಾಜನಗರ ರೈಲು ನಿಲ್ದಾಣವೇ ಇದಕ್ಕೆ ಸಮೀಪವಾದದ್ದು. ಮೈಸೂರಿನ ಆಗ್ನೇಯಕ್ಕೆ 61 ಕಿ.ಮೀ ದೂರದಲ್ಲೂ ನಂಜನಗೂಡಿನ ಪೂರ್ವಕ್ಕೆ 45 ಕಿ.ಮೀ ದೂರದಲ್ಲೂ ಚಾಮರಾಜನಗರ ರೈಲ್ವೆ ನಿಲ್ದಾಣಕ್ಕೆ ಉತ್ತರದಲ್ಲಿ 19 ಕಿ.ಮೀ ದೂರದಲ್ಲೂ ಇರುವ ಈ ಪಟ್ಟಣ ಸುವರ್ಣಾವತಿ(ಹೊನ್ನೆಳೆ) ನದಿಯ ದಡದಲ್ಲಿದೆ.

ಈ ಊರು ಹಿಂದೆ ಹದಿನಾಡು ಪ್ರಾಂತ್ಯದ ರಾಜಧಾನಿಯಾಗಿತ್ತೆಂದೂ ವಿಜಯನಗರದ ಅರಸರ ಕಾಲದಲ್ಲಿ ಸಂಪದ್ಭರಿತ ಪಟ್ಟಣವಾಗಿತ್ತೆಂದೂ ತಿಳಿದು ಬರುತ್ತದೆ. 1807 ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಯಳಂದೂರು ತಾಲ್ಲೂಕನ್ನು ದಿವಾನ ಪೂರ್ಣಯ್ಯನವರಿಗೆ ಜಹಗೀರಾಗಿ ಕೊಟ್ಟಿದ್ದು, ಇನಾಂ ರದ್ಧತಿ ಶಾಸನಕ್ಕೆ ಅನುಗುಣವಾಗಿ ಈ ತಾಲ್ಲೂಕು ಸರ್ಕಾರದ ವಶಕ್ಕೆ ಸೇರಿತು. ಈ ಊರನ್ನು ಎಳೆಯಂದೂರು(ಎಳೆಯ ಚಂದ್ರನ, ಬಾಲಚಂದ್ರನ ಊರು) ಎಂದು ಕರೆಯಲಾಗಿದೆ. ಈ ಊರು ಪೂರ್ವ ದಿಕ್ಕಿನ ಶ್ವೇತಗಿರಿ(ಬಿಳಿಗಿರಿ) ಆಗ್ನೇಯ ದಿಕ್ಕಿನ ಮಲ್ಲಿನಾಥಗಿರಿ, ದಕ್ಷಿಣ ದಿಕ್ಕಿನ ಸುರಗಿಗಿರಿ, ನೈರುತ್ಯ ದಿಕ್ಕಿನ ಶಂಕರೇಶ್ವರಗಿರಿ, ಪಶ್ಚಿಮ ದಿಕ್ಕಿನಲ್ಲಿ ಮಲ್ಲಿಕಾರ್ಜುನಗಿರಿ , ವಾಯುವ್ಯ ದಿಕ್ಕಿನಲ್ಲಿ ಶಂಭುಲಿಂಗನಗಿರಿ, ಉತ್ತರ ದಿಕ್ಕಿನ ಶ್ರೀಶೈಲಗಿರಿ, ಈಶಾನ್ಯ ದಿಕ್ಕಿನ ನಿರ್ಮಲಗಿರಿ ಈ ಎರಡು ಗಿರಿಗಳ ನಡುವೆ ಕಂಗೊಳಿಸುತ್ತಿದ್ದೆಂದು ಶಾಸನದಲ್ಲಿ ವರ್ಣಿಸಲಾಗಿದೆ.

**ಹವಾಗುಣ ಮತ್ತು ಮಳೆ :**

ಜಿಲ್ಲೆಯ ಹವಾಗುಣವು ಸಾಮಾನ್ಯವಾಗಿ ಸಮಶೀತೋಷ್ಣದಿಂದ ಕೂಡಿರುತ್ತದೆ. ಏಪ್ರಿಲ್ ನಿಂದ ಜೂನ್ ತಿಂಗಳ ವರೆಗೆ ಈ ಜಿಲ್ಲೆಯಲ್ಲಿ ಉಷ್ಣಾಂಶವು 33ಸೆ. ನಿಂದ 37ಸೆ. ನಷ್ಟು ಗರಿಷ್ಠ ಮಟ್ಟವನ್ನು ತಲುಪುವುದು. ಜಿಲ್ಲೆಯ ವಾಡಿಕೆ ಮಳೆಯ(1901–1970) 704.4 ಮೀ.ಮೀ ಗಳಾಗಿದ್ದು 2005ನೇ ಸಾಲಿನಲ್ಲಿ ಜಿಲ್ಲೆಯ ಸರಾಸರಿ ಮಳೆ 1195.7 ಮೀ.ಮೀ ನಷ್ಟು ಮಳೆಯಾಗಿತ್ತು. ಜಿಲ್ಲೆಯಲ್ಲಿ 32 ವೃಷ್ಟಿಮಾಪನಾ ಕೇಂದ್ರಗಳಿದ್ದು 2005ನೇ ಸಾಲಿನಲ್ಲಿ 29 ವೃಷ್ಟಿ ಮಾಪನ ಕೇಂದ್ರಗಳು ಕಾರ್ಯ ನಿರ್ವಹಿಸಿದವು.

**ನೀರಾವರಿ :**

2005–06 ನೇ ಸಾಲಿನಲ್ಲಿ ವಾರ್ಷಿಕ ಋತು ಮತ್ತು ಮಳೆ ವರದಿಯಂತೆ ನಿವ್ವಳ ನೀರಾವರಿ ಕ್ಷೇತ್ರವು 58,727 ಹೆ. ಆಗಿರುತ್ತದೆ. ಬೃಹತ್ ಜಲಾಶಯಗಳಾದ ಕಬಿನಿ ಮತ್ತು ಮಧ್ಯಮ ನೀರಾವರಿ ಜಲಾಶಯಗಳಾದ ಸುವರ್ಣಾವತಿ, ನಲ್ಲೂರು ಅಮಾನಿ ಕೆರೆ, ಚಿಕ್ಕಹೊಳೆ, ಗುಂಡಾಲ್ ಜಲಾಶಯಗಳಿಂದ 7,936 ಹೆ. ಪ್ರದೇಶವು ನೀರಾವರಿಯಾಗಿರುತ್ತದೆ.

**ಕೃಷಿ :**

ಜಿಲ್ಲೆಯ ಜನಸಂಖ್ಯೆಯಲ್ಲಿ ಶೇ 85 ರಷ್ಟು ಜನರು ಗ್ರಾಮೀಣ ಪ್ರದೇಶದವರಾಗಿದ್ದು ಕೃಷಿಯು ಇವರ ಪ್ರಮುಖ ಕಸುಬಾಗಿರುತ್ತದೆ. ಕೃಷಿಯು ಜಿಲ್ಲೆಯ ಆದಾಯವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸಿ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಿದೆ.

**ಭೂ ಉಪಯೋಗ :**

ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ 5.70 ಲಕ್ಷ ಹೆಕ್ಟೇರ್‌ಗಳಾಗಿದ್ದು 2005–06ನೇ ಸಾಲಿನ ವಾರ್ಷಿಕ ಋತು ಬೆಳೆಗಳ ವರದಿ ಪ್ರಕಾರ ಅರಣ್ಯ ಪ್ರದೇಶದ ವಿಸ್ತೀರ್ಣವು ಶೇ 48.36 ರಷ್ಟು. ಬಂಜರು ಮತ್ತು ವ್ಯವಸಾಯ ಮಾಡಲು ಯೋಗ್ಯವಲ್ಲದ ಪ್ರದೇಶದ ವಿಸ್ತೀರ್ಣವು ಶೇ 8.06 ರಷ್ಟು. ವ್ಯವಸಾಯ ಮಾಡಲು ಯೋಗ್ಯವಲ್ಲದ ಬಂಜರು ಪ್ರದೇಶ ಶೇ 3.76 ರಷ್ಟಿದ್ದು, ಬಿತ್ತನೆಯಾಗದೆ ಬೀಳು ಬಿಟ್ಟು ಪ್ರದೇಶವು ಶೇ 6.35. ಬಿತ್ತನೆಯಾದ ಒಟ್ಟು ಪ್ರದೇಶ ಶೇ 38.01 ರಷ್ಟಾಗಿದೆ.

**ಬೆಳೆ ಪದ್ಧತಿ :**

ಈ ಜಿಲ್ಲೆಯಲ್ಲಿ ಆಹಾರ ಬೆಳೆಗಳಾದ ಭತ್ತ, ರಾಗಿ, ಜೋಳ, ಮುಸುಕಿನ ಜೋಳ ಪ್ರಮುಖವಾದವು. ದ್ವಿದಳ ಧಾನ್ಯಗಳಾದ ಹುರುಳಿ, ತೊಗರಿ, ಅವರೆ ಮತ್ತು ಹಲಸಂದೆ ಮುಂತಾದವುಗಳು ವಾಣಿಜ್ಯ ಬೆಳೆಗಳ ಪೈಕಿ ಎಣ್ಣೆಕಾಳು, ನೆಲಗಡಲೆ, ಸೂರ್ಯಕಾಂತಿ, ಕಬ್ಬು ಮತ್ತು ಹಿಪ್ಪುನೇರಳೆ ಬೆಳೆಗಳಾಗಿವೆ.

**ಚಾಮರಾಜನಗರ :**

ಜೋಳ ಈ ತಾಲ್ಲೂಕಿನ ಮುಖ್ಯ ಬೆಳೆ. ರಾಗಿ, ಹುರುಳಿ ಮತ್ತು ಇತರೆ ಹಲವು ಖುಷ್ಕಿ ಬೆಳೆಗಳನ್ನು ಬೆಳೆಯುತ್ತಾರೆ. ಹತ್ತಿಯನ್ನೂ ಬೆಳೆಯುವುದುಂಟು. ಕೆಲವೆಡೆ ವರ್ಷಕ್ಕೆ ಎರಡು ಬೆಳೆ ತೆಗೆಯುತ್ತಾರೆ. ಹಿಪ್ಪುನೇರಳೆ ವ್ಯವಸಾಯವೂ ವಿಶೇಷವಾಗಿ ನಡೆಯುತ್ತದೆ. ರೇಷ್ಮೆ ಹುಳು ಸಾಕುವುದು, ಎಳೆ ತೆಗೆಯುವುದು ತಾಲ್ಲೂಕಿನ ಒಂದು ಮುಖ್ಯ ಕಸುಬು. ಹೊನ್ನುಹೊಳೆಯ ದಂಡೆಯ ಮೇಲೆ ಒಳ್ಳೆಯ ಅಡಕೆ, ತೆಂಗು ತೋಟಗಳಿವೆ. ತಾಲ್ಲೂಕಿನಲ್ಲಿ ಕಾಫಿ ತೋಟಗಳೂ ಉಂಟು.

**ಗುಂಡ್ಲುಪೇಟೆ :**

ಜೋಳ ಮುಖ್ಯ ಬೆಳೆ, ರಾಗಿ, ಅವರೆ, ಹರಳು, ಹತ್ತಿ, ಹೋಗೆಸೊಪ್ಪು ಇತ್ಯಾದಿಗಳ ವ್ಯವಸಾಯ ಸಹ ಇದೆ. ಕೆರೆಗಳಿಂದ ಸ್ವಲ್ಪ ಮಟ್ಟಿಗೆ ಭತ್ತದ ಬೆಳೆ ಆಗುತ್ತದೆ.

**ಕೊಳ್ಳೇಗಾಲ :**

ಆನರ ಮುಖ್ಯ ಕಸುಬು ಕೃಷಿ. ಅಲ್ಲಲ್ಲಿ ನಿರ್ಮಿಸಿರುವ ಕೆರೆಗಳು ಅಲ್ಪ ಪ್ರಮಾಣದಲ್ಲಿ ನೀರಾವರಿ ಸೌಲಭ್ಯವನ್ನು ಒದಗಿಸುತ್ತದೆ. ಭತ್ತ, ರಾಗಿ ಮುಖ್ಯಬೆಳೆಗಳು. ಸ್ವಲ್ಪ ಮಟ್ಟಿಗೆ ತೋಟದ ಬೆಳೆ ಸಹ ಉಂಟು.

**ಜಿಲ್ಲೆಯ ಗಡಿ ಭಾಗದಲ್ಲಿರುವ ಜಿಲ್ಲೆಗಳು :**

ಈ ಜಿಲ್ಲೆಯನ್ನು ಪೂರ್ವಕ್ಕೆ ತಮಿಳುನಾಡಿನ ಸೇಲಂ ಮತ್ತು ಕೊಯಮತ್ತೂರು ಜಿಲ್ಲೆಗಳು, ಉತ್ತರಕ್ಕೆ ಮಂಡ್ಯ, ಬೆಂಗಳೂರು ಜಿಲ್ಲೆಗಳು, ಪಶ್ಚಿಮಕ್ಕೆ ಮೈಸೂರು ಜಿಲ್ಲೆ ಹಾಗೂ ದಕ್ಷಿಣಕ್ಕೆ ತಮಿಳುನಾಡಿನ ನೀಲಗಿರಿ ಜಿಲ್ಲೆಯು ಸುತ್ತುವರಿದಿದೆ. ಈ ಜಿಲ್ಲೆಯ ದಕ್ಷಿಣೋತ್ತರವಾಗಿ ಪೂರ್ವ ಘಟ್ಟಕ್ಕೆ ಹೊಂದಿಕೊಂಡಿರುವಂತೆ ಬೆಟ್ಟದ ಸಾಲುಗಳಿಂದ ಆವೃತವಾಗಿದೆ.

**ಜಿಲ್ಲೆಯಲ್ಲಿ ಹರಿಯುವ ಪ್ರಮುಖ ನದಿಗಳು :**

ಈ ಜಿಲ್ಲೆಯಲ್ಲಿ ಯಾವುದೇ ದೊಡ್ಡ ನದಿಗಳು ಇರುವುದಿಲ್ಲ. ಸುವರ್ಣಾವತಿ ಮತ್ತು ಚಿಕ್ಕಹೊಳೆ ಉಪ ನದಿಗಳು ಮಾತ್ರ ಹರಿಯುತ್ತವೆ.

**ಜಿಲ್ಲೆಯ ಆಡಳಿತ ವಿಭಾಗ :**

ಜಿಲ್ಲೆಯಲ್ಲಿ ಒಟ್ಟು 4 ತಾಲ್ಲೂಕುಗಳಿದ್ದು ಒಂದು ಕಂದಾಯ ಉಪ ವಿಭಾಗವನ್ನು ಹೊಂದಿರುತ್ತದೆ. ಈ ಜಿಲ್ಲೆಯ ವ್ಯಾಪ್ತಿಯಲ್ಲಿ 1)ಚಾಮರಾಜನಗರ, 2)ಗುಂಡ್ಲುಪೇಟೆ, 3)ಕೊಳ್ಳೇಗಾಲ 4)ಯಳಂದೂರು ತಾಲ್ಲೂಕುಗಳು ಸೇರಿರುತ್ತವೆ.

**ಜಿಲ್ಲೆಯಲ್ಲಿರುವ ಗ್ರಾಮಗಳ ಸಂಖ್ಯೆ :**

2001 ನೇ ಜನಗಣತಿ ಪ್ರಕಾರ ಚಾಮರಾಜನಗರ ಜಿಲ್ಲೆಯ 968 ಗ್ರಾಮಗಳಿದ್ದು, ಇವುಗಳ ಪೈಕಿ 424 ಜನವಸತಿ ಇರುವ ಗ್ರಾಮಗಳು, 85 ಜನ ವಸತಿ ಇಲ್ಲದ ಗ್ರಾಮಗಳು ಹಾಗೂ 554 ದಾಖಲೆ ಗ್ರಾಮಗಳಿದ್ದು ಚಾಮರಾಜನಗರ ಜಿಲ್ಲೆಯಲ್ಲಿ 16 ಹೋಬಳಿಗಳಿರುತ್ತವೆ. ಈ ಜಿಲ್ಲೆಯು ಎರಡು ನಗರಸಭೆ, ಒಂದು ಪುರಸಭೆ, ಎರಡು ಪಟ್ಟಣ ಪಂಚಾಯ್ತಿಗಳನ್ನೊಳಗೊಂಡಿರುತ್ತದೆ.

| ಕ್ರ.ಸಂ | ತಾಲ್ಲೂಕು | ಹೋಬಳಿ | ಗ್ರಾಮ ಪಂಚಾಯ್ತಿ | ಜನವಸತಿ ಪ್ರದೇಶ | ಜನವಸತಿ ಇಲ್ಲದಿರುವುದು | ದಾಖಲೆ ಗ್ರಾಮಗಳು |
|---|---|---|---|---|---|---|
| 01 | ಚಾಮರಾಜನಗರ | 05 | 42 | 171 | 13 | 97 |
| 02 | ಗುಂಡ್ಲುಪೇಟೆ | 04 | 30 | 140 | 18 | 55 |
| 03 | ಕೊಳ್ಳೇಗಾಲ | 05 | 37 | 85 | 54 | 376 |
| 04 | ಯಳಂದೂರು | 02 | 11 | 28 | – | 26 |
| | **ಒಟ್ಟು** | **16** | **120** | **424** | **85** | **554** |

**ಜನಸಂಖ್ಯೆ ಮತ್ತು ವಿಸ್ತೀರ್ಣ :**

ಚಾಮರಾಜನಗರ ಜಿಲ್ಲೆಯ ವಿಸ್ತೀರ್ಣವು 5,699 ಚ.ಕಿ.ಮೀ ಆಗಿರುತ್ತದೆ. 2001 ಜನಗಣತಿ ಪ್ರಕಾರ ಜಿಲ್ಲೆಯ ಒಟ್ಟು ಜನಸಂಖ್ಯೆ 9,65,462 ಇದ್ದು ಪ್ರತಿ ಚ.ಕಿ.ಮೀ 189 ಜನರಿರುತ್ತಾರೆ. ಜನಸಾಂದ್ರತೆಯಲ್ಲಿ ಈ ಜಿಲ್ಲೆಯು ರಾಜ್ಯದಲ್ಲೇ 25ನೇ ಸ್ಥಾನವನ್ನು ಪಡೆದಿರುತ್ತದೆ. ಪ್ರತಿ 1000 ಪುರುಷರಿಗೆ 971 ಜನ ಸ್ತ್ರೀಯರು ಇರುತ್ತಾರೆ. ಒಟ್ಟು ಜಿಲ್ಲೆಯಲ್ಲಿ 4.90 ಲಕ್ಷ ಪುರುಷರು ಹಾಗೂ 4.75 ಲಕ್ಷ ಮಹಿಳೆಯರು ಇರುತ್ತಾರೆ. ಜನಸಂಖ್ಯಾ ಬೆಳವಣಿಗೆ 1991–2001 ರ ದಶಕದಲ್ಲಿ ಶೇಕಡ 9.3 ರಷ್ಟು ಇದೆ.

## ಜನಸಂಖ್ಯೆ ವಿವರ (2001ನೇ ಸಾಲಿನ ಜನಗಣತಿಯಂತೆ)

| ಕ್ರ.ಸಂ | ತಾಲ್ಲೂಕು | ಗ್ರಾಮೀಣ ಪ್ರದೇಶದ ಜನಸಂಖ್ಯೆ | ಪಟ್ಟಣ ಪ್ರದೇಶದಲ್ಲಿ ಜನಸಂಖ್ಯೆ | ಒಟ್ಟು ಜನಸಂಖ್ಯೆ |
|---|---|---|---|---|
| 01 | ಚಾಮರಾಜನಗರ | 277013 | 60558 | 337571 |
| 02 | ಗುಂಡ್ಲುಪೇಟೆ | 186742 | 26340 | 213082 |
| 03 | ಕೊಳ್ಳೇಗಾಲ | 284231 | 52607 | 336838 |
| 04 | ಯಳಂದೂರು | 69386 | 8585 | 77971 |
| | **ಒಟ್ಟು** | **817372** | **148090** | **965462** |

**ಚಾಮರಾಜನಗರ ಜಿಲ್ಲೆಯಲ್ಲಿರುವ ವಿವಿಧ ಪ್ರೇಕ್ಷಣೆಯ ಸ್ಥಳಗಳ ವಿವರ :**

| ಕ್ರ.ಸಂ | ತಾಲ್ಲೂಕು | ಪ್ರೇಕ್ಷಣೆಯ ಸ್ಥಳಗಳು |
|---|---|---|
| 01 | ಚಾಮರಾಜನಗರ | 1) ಚಾ.ನಗರ ಪಟ್ಟಣದ ಚಾಮರಾಜೇಶ್ವರ ದೇವಸ್ಥಾನ<br>2) ಕರಿವರದರಾಜಸ್ವಾಮಿ ದೇವಸ್ಥಾನ<br>3) ಕೆ.ಗುಡಿ ಅರಣ್ಯ ಧಾಮ<br>4) ರಾಮಸಮುದ್ರ ಹರಳಕೋಟೆ ಆಂಜನೇಯಸ್ವಾಮಿ ದೇವಸ್ಥಾನ<br>5) ನರಸಮಂಗಲ ದೇವಸ್ಥಾನ<br>6) ಯಡಬೆಟ್ಟ ಮಹದೇಶ್ವರಸ್ವಾಮಿ ದೇವಸ್ಥಾನ |
| 02 | ಗುಂಡ್ಲುಪೇಟೆ | 1) ತೆರಕಣಾಂಬಿ ಹುಲಗನಮುರಡಿ ವೆಂಕಟರಮಣಸ್ವಾಮಿ ದೇವಸ್ಥಾನ<br>2) ಹಿಮವದ್ ಗೋಪಾಲಸ್ವಾಮಿ ದೇವಸ್ಥಾನ<br>3) ಬಂಡೀಪುರ ಅಭಯಾರಣ್ಯ ಪ್ರದೇಶ |
| 03 | ಕೊಳ್ಳೇಗಾಲ | 1) ಶ್ರೀ ಮಲೈ ಮಹದೇಶ್ವರಸ್ವಾಮಿ ಬೆಟ್ಟ<br>2) ಕುರುಬನಕಟ್ಟೆ ದೇವಸ್ಥಾನ<br>3) ಹೊಗೆನಕಲ್ ಫಾಲ್ಸ್ ಪ್ರದೇಶ<br>4) ಬೂದುಬಾಳು ದೇವಸ್ಥಾನ<br>5) ಚಿಕ್ಕಲ್ಲೂರು ಸಿದ್ದಪ್ಪಾಜಿ ದೇವಸ್ಥಾನ |
| 04 | ಯಳಂದೂರು | 1) ಶ್ರೀ ಬಿಳಿಗಿರಿರಂಗನಾಥಸ್ವಾಮಿ ದೇವಸ್ಥಾನ<br>2) ವಡ್ಡಗೆರೆ ಆಂಜನೇಯಸ್ವಾಮಿ ದೇವಸ್ಥಾನ<br>3) ಜಡೇಸ್ವಾಮಿ ದೇವಸ್ಥಾನ<br>4) ಯಳಂದೂರು ಪಟ್ಟಣದ ಬಳೆಮಂಟಪ ಮತ್ತು ಜಾಗೀರ್‌ದಾರ್ ಬಂಗಲೆ |

**2008 ರಲ್ಲಿ ನಡೆಸಿದ ಸಮೀಕ್ಷೆಯಂತೆ ಚಾಮರಾಜನಗರ ಜಿಲ್ಲೆಯ ಜನಸಂಖ್ಯೆ ಮತ್ತು ಮತದಾರರ ವಿವರಗಳು ಈ ಕೆಳಕಂಡಂತೆ ಇರುತ್ತದೆ.**

| ಕ್ರ.ಸಂ | ಕ್ಷೇತ್ರದ ಹೆಸರು | ಜನಸಂಖ್ಯೆ | ಮತದಾರರು |
|---|---|---|---|
| 01 | ಚಾಮರಾಜನಗರ ವಿಧಾನಸಭಾ ಕ್ಷೇತ್ರ | 234699 | 162634 |
| 02 | ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರ | 230036 | 155099 |
| 03 | ಸಂತೇಮರಹಳ್ಳಿ ಮೀಸಲು ವಿಧಾನಸಭಾ ಕ್ಷೇತ್ರ | 191956 | 131444 |
| 04 | ಕೊಳ್ಳೇಗಾಲ ಮೀಸಲು ವಿಧಾನಸಭಾ ಕ್ಷೇತ್ರ | 221564 | 151552 |
| 05 | ಹನೂರು ವಿಧಾನಸಭಾ ಕ್ಷೇತ್ರ | 225883 | 166632 |
| | | **1104138** | **767361** |

**ಚಾಮರಾಜನಗರ ಜಿಲ್ಲೆಯಲ್ಲಿರುವ ಒಟ್ಟು ಮತದಾರರ ವಿವರ : 2007–08**

| ವಿವರ | ಗಂಡಸರು | ಹೆಂಗಸರು | ಒಟ್ಟು ಮತದಾರರು |
|---|---|---|---|
| ಚಾ.ನಗರ ಜಿಲ್ಲೆ | 4,05,314 | 3,93,959 | 7,99,273 |
| ಚಾ.ನಗರ ವಿಧಾನಸಭಾ ಕ್ಷೇತ್ರ | 85,786 | 83,783 | 1,69,569 |
| ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರ | 81,620 | 79,937 | 1,61,557 |
| ಸಂತೇಮರಳ್ಳಿ ಮೀಸಲು ವಿಧಾನಸಭಾ ಕ್ಷೇತ್ರ | 69,439 | 67,150 | 1,36,589 |
| ಕೊಳ್ಳೇಗಾಲ ಮೀಸಲು ವಿಧಾನಸಭಾ ಕ್ಷೇತ್ರ | 81,013 | 77,675 | 1,58,688 |
| ಹನೂರು ವಿಧಾನಸಭಾ ಕ್ಷೇತ್ರ | 87,456 | 85,410 | 1,72,866 |

**ಪೊಲೀಸ್ ಠಾಣೆಗಳು :**

ಚಾಮರಾಜನಗರ ಜಿಲ್ಲೆಗೆ ಸೇರಿದಂತೆ ಈ ಕೆಳಕಂಡ ಪೊಲೀಸ್ ಠಾಣೆಗಳು ಮತ್ತು ಉಪಠಾಣೆಗಳು ಇರುತ್ತವೆ.

| ಕ್ರ.ಸಂ | ಠಾಣೆಯ ಹೆಸರು | ಉಪಠಾಣೆಯ ಹೆಸರು |
|---|---|---|
| 01 | ಚಾಮರಾಜನಗರ ಪಟ್ಟಣ ಠಾಣೆ | – |
| 02 | ಚಾಮರಾಜನಗರ ಗ್ರಾಮಾಂತರ ಠಾಣೆ | ಉಡಿಗಾಲ ಉಪ ಠಾಣೆ |
| 03 | ಚಾಮರಾಜನಗರ ಪೂರ್ವ ಠಾಣೆ | ಕಾಗಲವಾಡಿ ಉಪ ಠಾಣೆ |
| 04 | ಕುದೇರು ಠಾಣೆ | – |
| 05 | ಸಂತೇಮರಳ್ಳಿ ಠಾಣೆ | – |
| 06 | ಗುಂಡ್ಲುಪೇಟೆ ಠಾಣೆ | ಬೇಗೂರು ಉಪ ಠಾಣೆ |
| 07 | ತೆರಕಣಾಂಬಿ ಠಾಣೆ | ಕಬ್ಬಳ್ಳಿ ಉಪ ಠಾಣೆ |
| 08 | ಯಳಂದೂರು ಠಾಣೆ | ಬಿಳಿಗಿರಿರಂಗನಬೆಟ್ಟ ಉಪಠಾಣೆ |
| 09 | ಮಾಂಬಳ್ಳಿ ಠಾಣೆ | – |
| 10 | ಕೊಳ್ಳೇಗಾಲ ಪಟ್ಟಣ ಠಾಣೆ | – |
| 11 | ಕೊಳ್ಳೇಗಾಲ ಗ್ರಾಮಾಂತರ ಠಾಣೆ | – |
| 12 | ಹನೂರು ಠಾಣೆ | ಲೊಕ್ಕನಹಳ್ಳಿ & ಬೈಲೂರು ಉಪಠಾಣೆ |
| 13 | ರಾಮಾಪುರ ಠಾಣೆ | – |
| 14 | ಮಲೇ ಮಹದೇಶ್ವರಬೆಟ್ಟ ಠಾಣೆ | – |

**ಚಾಮರಾಜನಗರ ಜಿಲ್ಲೆಯಲ್ಲಿರುವ ಪ್ರಮುಖ ರಸ್ತೆಗಳ ವಿವರ :**

| **ತಾಲ್ಲೂಕು** | **ರಾಷ್ಟ್ರೀಯ ಹೆದ್ದಾರಿ** | **ರಾಜ್ಯ ಹೆದ್ದಾರಿ** | **ಜಿಲ್ಲಾ ಮುಖ್ಯ ರಸ್ತೆ** | **ರಸ್ತೆಯ ಒಟ್ಟು ಉದ್ದ (ಕಿ.ಮೀ.ಗಳಲ್ಲಿ)** |
|---|---|---|---|---|
| ಚಾಮರಾಜನಗರ | 61 ಕಿ.ಮೀ | 94 ಕಿ.ಮೀ | 291 ಕಿ.ಮೀ | 446 ಕಿ.ಮೀ |
| ಗುಂಡ್ಲುಪೇಟೆ | 87 ಕಿ.ಮೀ | 53 ಕಿ.ಮೀ | 256 ಕಿ.ಮೀ | 396 ಕಿ.ಮೀ |
| ಯಳಂದೂರು | 17 ಕಿ.ಮೀ | 41 ಕಿ.ಮೀ | 52 ಕಿ.ಮೀ | 110 ಕಿ.ಮೀ |
| ಕೊಳ್ಳೇಗಾಲ | 22 ಕಿ.ಮೀ | 152 ಕಿ.ಮೀ | 315 ಕಿ.ಮೀ | 488 ಕಿ.ಮೀ |
| **ಚಾ.ನಗರ ಜಿಲ್ಲೆ** | **187 ಕಿ.ಮೀ** | **339 ಕಿ.ಮೀ** | **913 ಕಿ.ಮೀ** | **1439 ಕಿ.ಮೀ** |

**ರಾಷ್ಟ್ರೀಯ ಹೆದ್ದಾರಿ :**

**ಎನ್.ಹೆಚ್–209** : ( ಬೆಂಗಳೂರಿನಿಂದ ಕೊಳ್ಳೇಗಾಲ ಮಾರ್ಗ ಕೊಯಮತ್ತೂರು )

ಬೆಂಗಳೂರು, ಮಳವಳ್ಳಿ, ಮದ್ದೂರು, ಕೊಳ್ಳೇಗಾಲ, ಚಾಮರಾಜನಗರ, ದಿಂಡಿಗಲ್, ಪೊಲ್ಲಾಚಿ, ಕೊಯಮತ್ತೂರು, ಅಣ್ಣೂರ್, ಸತ್ಯಮಂಗಲಂ,

**ಎನ್.ಹೆಚ್–218** : ಕೋಜಿಕೋಡ್, ಕೊಳ್ಳೇಗಾಲ, ಮೈಸೂರು

**ಎನ್.ಹೆಚ್–212** : ಈ ಹೆದ್ದಾರಿಯು ಎನ್.ಹೆಚ್.17 ಕೇರಳದ ಕೋಜಿಕೋಡ್ ಹತ್ತಿರದಿಂದ ಪ್ರಾರಂಭವಾಗಿ ಮೈಸೂರು ನಗರವನ್ನು ಸಂಧಿಸುತ್ತದೆ ಹಾಗೂ ಕೊಳ್ಳೇಗಾಲದ ಹತ್ತಿರ ಎನ್.ಹೆಚ್. 209 ರಲ್ಲಿ ಸೇರುತ್ತದೆ.

**ಎನ್.ಹೆಚ್–67** : ಮೆಟ್ಟುಪಾಳ್ಯಂ, ಊಟಿ, ಗೂಡ್ಲೂರು, ಗುಂಡ್ಲುಪೇಟೆ ಮಾರ್ಗವಾಗಿ ಬಂದು ಎನ್.ಹೆಚ್. 212 ನ್ನು ಸಂಧಿಸುತ್ತದೆ.

**ಚಾಮರಾಜನಗರ ಜಿಲ್ಲೆಯಲ್ಲಿರುವ ಪ್ರಮುಖ ಮುಖ್ಯ ಅರಣ್ಯ ಪ್ರದೇಶಗಳ ವಿವರ :**

1) ಬಂಡೀಪುರ ಅರಣ್ಯ ಪ್ರದೇಶ
2) ಬಿಳಿಗಿರಿರಂಗನಬೆಟ್ಟ ಅರಣ್ಯ ಪ್ರದೇಶ
3) ಮಲೇ ಮಹದೇಶ್ವರ ಅರಣ್ಯ ಪ್ರದೇಶ
4) ಕೆ.ಗುಡಿ ಅರಣ್ಯ ಪ್ರದೇಶ
5) ಪುಣಜನೂರು ಅರಣ್ಯ ಪ್ರದೇಶ

| ಕ್ರ.ಸಂ | ತಾಲ್ಲೂಕು | ಭೌಗೋಳಿಕ ವಿಸ್ತೀರ್ಣ | ಅರಣ್ಯ ಪ್ರದೇಶ | ವ್ಯವಸಾಯೇತರ ಮತ್ತು ಬಂಜರು ಭೂಮಿ |
|---|---|---|---|---|
| 01 | ಚಾಮರಾಜನಗರ | 123078 ಎಕರೆ | 26903 ಎಕರೆ | 12733 ಎಕರೆ |
| 02 | ಗುಂಡ್ಲುಪೇಟೆ | 140607 ಎಕರೆ | 44858 ಎಕರೆ | 11324 ಎಕರೆ |
| 03 | ಯಳಂದೂರು | 26473 ಎಕರೆ | 10589 ಎಕರೆ | 5629 ಎಕರೆ |
| 04 | ಕೊಳ್ಳೇಗಾಲ | 279743 ಎಕರೆ | 193259 ಎಕರೆ | 16254 ಎಕರೆ |

**ಚಾಮರಾಜನಗರ ಜಿಲ್ಲೆಯಲ್ಲಿಯ ಜನಸಂಖ್ಯೆ ಜಾತಿವಾರು ಮತ್ತು ವಿಧಾನಸಭಾ ಕ್ಷೇತ್ರವಾರು ವಿವರ :**

| ಕ್ರ.ಸಂ | ಜಾತಿವಾರು | ಚಾ.ನಗರ | ಸಂತೇಮರಳ್ಳಿ | ಗುಂಡ್ಲುಪೇಟೆ | ಕೊಳ್ಳೇಗಾಲ | ಹನೂರು | ಒಟ್ಟು |
|---|---|---|---|---|---|---|---|
| 1. | ಬ್ರಾಹ್ಮಣರು | 3340 | 646 | 1844 | 941 | 288 | 7059 |
| 2. | ಲಿಂಗಾಯ್ತರು | 56577 | 46677 | 65867 | 26056 | 38752 | |
| 3. | ವಕ್ಕಲಿಗರು | 4985 | 2667 | 2756 | 6237 | 10272 | 26917 |
| 4. | ಜೈನರು | 925 | 17 | 259 | 2472 | 2374 | |
| 5. | ವಿಶ್ವಕರ್ಮ | 1257 | 1329 | 2920 | 2610 | 13799 | 21915 |
| 6. | ಕುರುಬರು | 14853 | 10654 | 19934 | 10112 | 13711 | 69264 |
| 7. | ನಾಯಕರು | 22643 | 17942 | 23402 | 25991 | 214 | 90192 |
| 8 | ಈಡಿಗರು | 893 | 398 | 430 | 410 | 356 | 2487 |
| 9 | ಗಾಣಿಗರು | 4602 | 669 | 656 | 494 | 9471 | 15892 |
| 10 | ಉಪ್ಪಾರ | 30047 | 24581 | 20682 | 28024 | 764 | 104098 |
| 11. | ದೇವಾಂಗ | 1010 | 25 | 184 | 9056 | 829 | 11104 |
| 12. | ನಯನ ಕ್ಷತ್ರೀಯ | 1435 | 705 | 797 | 955 | 2041 | 5933 |
| 13. | ಕುಂಬಾರರು | 2801 | 1057 | 4190 | 1849 | 2552 | 12449 |
| 14. | ಮಡಿವಾಳರು | 3740 | 1887 | 3039 | 3740 | 1887 | 14293 |
| 15. | ಮುಸ್ಲಿಂ | 11541 | 5376 | 4400 | 9686 | 10221 | 41224 |
| 16. | ಕ್ರಿಶ್ಚಿಯನ್ | 1282 | 500 | 95 | 3452 | 15675 | 21004 |
| 18. | ತಮಿಳರು | 1075 | 1489 | 375 | 4667 | 49424 | 57030 |
| 19. | ಪರಿಶಿಷ್ಟಜಾತಿ | 40762 | 45975 | 40799 | 55497 | 16520 | 199553 |
| 20 | ಪರಿಶಿಷ್ಟ ಪಂಗಡ | 2422 | 1900 | 4222 | 4275 | 9710 | 22529 |
| 21 | ಸೋಲಿಗರು | | | | | | |
| 22 | ಬಣಜಿಗರು | 95 | 75 | 1497 | 392 | 3406 | 5465 |
| 23. | ಇತರರು | 2566 | 2329 | 914 | 2017 | 6071 | 13897 |
| | ಒಟ್ಟು | 208851 | 166898 | 199262 | 198933 | 208337 | 982281 |

## ಚಾಮರಾಜನಗರ ಜಿಲ್ಲೆಯಲ್ಲಿರುವ ಕ್ರಿಶ್ಚಿಯನ್ ಚೆರ್ಚ್‌ಗಳ ವಿವಿರ

**1. ಚಾಮರಾಜನಗರ ತಾಲ್ಲೊಕಿನಲ್ಲಿರುವ ಕ್ರಿಶ್ಚಿಯನ್ ಚೆರ್ಚ್‌ಗಳ ವಿವಿರ**

| ಕ್ರ.ಸಂ | ಚೆರ್ಚ್‌ಗಳ ವಿವರ |
|---|---|
| 01 | ಸಂತ ಪೌಲರ ದೇವಾಲಯ<br>ನಂಜನಗೂಡು ರಸ್ತೆ ಚಾಮರಾಜನಗರ ಪಟ್ಟಣ |
| 02 | ಸಿ.ಎಸ್.ಐ ಚೆರ್ಚ್<br>ಸತ್ತಿ ರಸ್ತೆ, ಚಾಮರಾಜನಗರ ಪಟ್ಟಣ |
| 03 | ಸಿ.ಎಸ್.ಐ ಚೆರ್ಚ್<br>ಮಸಗಾಪುರ, ಚಾಮರಾಜನಗರ ತಾಲ್ಲೋಕು |
| 04 | ಸಿ.ಎಸ್.ಐ ಚೆರ್ಚ್<br>ಭೋಗಾಪುರ ಚಾಮರಾಜನಗರ ತಾಲ್ಲೋಕು |
| 05 | ರೋಮನ್ ಕ್ಯಾಥೋಲಿಕ್ ಚೆರ್ಚ್<br>ಕಿಗರಸೂರು ಚಾಮರಾಜನಗರ ತಾಲ್ಲೋಕು |
| 06 | ಸಿ.ಎಸ್.ಐ ಚೆರ್ಚ್<br>ಕೆಲ್ಲಂಬಳ್ಳಿ, ಚಾಮರಾಜನಗರ ತಾಲ್ಲೋಕು |
| 07 | ಸಿ.ಎಸ್.ಐ ಚೆರ್ಚ್<br>ಹೆಗ್ಗವಾಡಿ, ಚಾಮರಾಜನಗರ ತಾಲ್ಲೋಕು |
| 08 | ರೋಮನ್ ಕ್ಯಾಥೋಲಿಕ್ ಚೆರ್ಚ್<br>ದೊಡ್ಡರಾಯಪೇಟೆ, ಚಾಮರಾಜನಗರ |
| 09 | ರೋಮನ್ ಕ್ಯಾಥೋಲಿಕ್ ಚೆರ್ಚ್<br>ಕೋಡಿಉಗನೆ ಚಾಮರಾಜನಗರ ತಾಲ್ಲೋಕು |
| 10 | ರೋಮನ್ ಕ್ಯಾಥೋಲಿಕ್ ಚೆರ್ಚ್<br>ನಾಗವಳ್ಳಿ, ಚಾಮರಾಜನಗರ ತಾಲ್ಲೋಕು |
| 11 | ಸಿ.ಎಸ್.ಐ ಚೆರ್ಚ್<br>ಮಾದಾಪುರ ಚಾಮರಾಜನಗರ ತಾಲ್ಲೋಕು |
| 12 | ಮೊಟೆಸ್ವಿಯನ್ ಚೆರ್ಚ್<br>ಮಂಗಲದ ಹೊಸೂರು, ಚಾಮರಾಜನಗರ ತಾಲ್ಲೋಕು |
| 13 | ಮೊಟೆಸ್ವಿಯನ್ ಚೆರ್ಚ್<br>ಬಸವಟ್ಟಿ, ಚಾಮರಾಜನಗರ ತಾಲ್ಲೋಕು |
| 14 | ರೋಮನ್ ಕ್ಯಾಥೋಲಿಕ್ ಚೆರ್ಚ್<br>ಕೆಂಪನಪುರ, ಚಾಮರಾಜನಗರ ತಾಲ್ಲೋಕು |
| 15 | ಸಿ.ಎಸ್.ಐ ಚೆರ್ಚ್<br>ಕೆಸ್ತೂರು, ಚಾಮರಾಜನಗರ ತಾಲ್ಲೋಕು |

2. ಗುಂಡ್ಲುಪೇಟೆ ತಾಲ್ಲೋಕಿನಲ್ಲಿರುವ ಕ್ರಿಶ್ಚಿಯನ್ ಚರ್ಚ್‌ಗಳ ವಿವರ

| ಕ್ರ.ಸಂ | ಚರ್ಚ್‌ಗಳ ವಿವರ |
|---|---|
| 01 | ಲೂರ್ದ್ ಮೇರಿಯಮ್ ಚರ್ಚ್<br>ಗುಂಡ್ಲುಪೇಟೆ ಪಟ್ಟಣ |
| 02 | ಸೆಂಟ್ ಪೀಟರ್ ಚರ್ಚ್<br>ಗುಂಡ್ಲುಪೇಟೆ ಪಟ್ಟಣ |

3. ಕೊಳ್ಳೇಗಾಲ ತಾಲ್ಲೋಕಿನಲ್ಲಿರುವ ಕ್ರಿಶ್ಚಿಯನ್ ಚರ್ಚ್‌ಗಳ ವಿವರ

| ಕ್ರ.ಸಂ | ಚರ್ಚ್‌ಗಳ ವಿವರ |
|---|---|
| 01 | ಬೇತಲನ್ ಲೂರ್ಥರನ್ ಚರ್ಚ್, ಕೊಳ್ಳೇಗಾಲ ಪಟ್ಟಣ |
| 02 | ರೋಮನ್ ಕ್ಯಾಥೋಲಿಕ್ ಚರ್ಚ್, ಕೊಳ್ಳೇಗಾಲ ಪಟ್ಟಣ |
| 03 | ಗ್ರೇಸ್ ಚರ್ಚ್, ಕೊಳ್ಳೇಗಾಲ ಪಟ್ಟಣ |
| 04 | ಅರುಣೋದಯ ದೇವಾಲಯ ಚರ್ಚ್, ಕೊಳ್ಳೇಗಾಲ ಪಟ್ಟಣ |
| 05 | ಚಿಯೋನ ಚರ್ಚ್ , ಕೊಳ್ಳೇಗಾಲ ಪಟ್ಟಣ |
| 06 | ಬ್ರದರನ್ ಚರ್ಚ್, ಕೊಳ್ಳೇಗಾಲ ಪಟ್ಟಣ |
| 07 | ಎಸ್.ಡಿ.ಎ ಚರ್ಚ್, ಕೊಳ್ಳೇಗಾಲ ಪಟ್ಟಣ |
| 08 | ಹೊಸ ಅಪೋಸ್ತಲರ ಚರ್ಚ್, ಕೊಳ್ಳೇಗಾಲ ಪಟ್ಟಣ |
| 09 | ಸಂತ ಅಂಥೋಸ್ತಲರಿ ಚರ್ಚ್<br>ಸತ್ತೇಗಾಲ ಜಾಗೇರಿಯ ಪಾಸ್ಕಲ್ ನಗರ, ಕೊಳ್ಳೇಗಾಲ ತಾಲ್ಲೋಕು |
| 10 | ಪವಿತ್ರಾತ್ಮರ ದೇವಾಲಯ<br>ಕ್ರಿಸ್ತರಾಜನಗರ ಸತ್ತೇಗಾಲ ಜಾಗೇರಿ, ಕೊಳ್ಳೇಗಾಲ ತಾಲ್ಲೋಕು |
| 11 | ಪವಿತ್ರಾತ್ಮರ ದೇವಾಲಯ<br>ಸತ್ತೇಗಾಲ ಜಾಗೇರಿ, ಕೊಳ್ಳೇಗಾಲ ತಾಲ್ಲೋಕು |
| 12 | ಲೋಕ ರಕ್ಷಿತನ ದೇವಾಲಯ<br>ಸತ್ತೇಗಾಲ ಜಾಗೇರಿ ಶಾಂತಿನಗರ, ಕೊಳ್ಳೇಗಾಲ ತಾಲ್ಲೋಕು |
| 13 | ಸಂತ ಮೇರಿಸ್ ಚರ್ಚ್<br>ಮರಿಯಾಪುರ ಕೊಳ್ಳೇಗಾಲ ತಾಲ್ಲೋಕು |
| 14 | ಸಂತ ಲೂಯಿಸ್ ಚರ್ಚ್<br>ಪ್ರಕಾಶ್ ಪಾಳ್ಯ ಕೊಳ್ಳೇಗಾಲ ತಾಲ್ಲೋಕು |
| 15 | ಸೆಂಟ್ ಲೂಯೀಸ್ ಚರ್ಚ್<br>ಚಿಕ್ಕಳ್ಳಿ, ಕೊಳ್ಳೇಗಾಲ ತಾಲ್ಲೊಕು |
| 16 | ಅವರ ಲೇಡಿ ಆಫ್ ಗುಂಡ ಹೆಲ್ಸ (ಆರೋಗ್ಯ ಮಾತೆ ದೇವಾಲಯ<br>ಮುಳ್ಳೂರು, ಕೊಳ್ಳೇಗಾಲ ತಾಲ್ಲೋಕು |
| 17 | ಆರ್.ಸಿ ಚರ್ಚ್<br>ಚಿಕ್ಕಮಾಲಾಪುರ ಕೊಳ್ಳೆಗಾಲ ತಾಲ್ಲೋಕು |

| | |
|---|---|
| 18 | ಆರ್.ಸಿ ಚರ್ಚ್<br>ಅನಗಳ್ಳಿದೊಡ್ಡಿ, ಕೊಳ್ಳೇಗಾಲ ತಾಲ್ಲೋಕು |
| 19 | ಇಗ್ನೇಸಿಯನ್ ಚರ್ಚ್<br>ತೋಮಿಯರ್ ಪಾಳ್ಯ, ಕೊಳ್ಳೇಗಾಲ ತಾಲ್ಲೋಕು |
| 20 | ಯೇಸು ಬಾಲ ದೇವಾಲಯ<br>ಗೂಳ್ಯ, ಕೊಳ್ಳೇಗಾಲ ತಾಲ್ಲೋಕು |
| 21 | ಸಂಟ್ ಥಾಮಸ್ ಚರ್ಚ್<br>ತೋಮಿಯರ್ ಪಾಳ್ಯ, ಕೊಳ್ಳೆಗಾಲ ತಾಲ್ಲೋಕು |
| 22 | ಸೇಂಟ್ ಜೋಸೆಪ್ ಚರ್ಚ್<br>ಪಿ.ಜಿ.ಪಾಳ್ಯ, ಕೊಳ್ಳೇಗಾಲ ತಾಲ್ಲೋಕು |
| 23 | ಸೇಂಟ್ ಪ್ರಾನ್ಸಿಸ್ ಜಾವಿಯರ್ ಚರ್ಚ್<br>ಕಾಮಗೆರೆ ಕೊಳ್ಳೇಗಾಲ ತಾಲ್ಲೋಕು |
| 24 | ಜ್ಞಾನ ಪ್ರಕಾಶ್ ಸ್ಮಾರಕ ಚರ್ಚ್<br>ಕಣ್ಣೂರು, ಕೊಳ್ಳೇಗಾಲ ತಾಲ್ಲೋಕು |
| 25 | ಎಸ್.ಡಿ.ಎ ಚರ್ಚ್<br>ಕಾಮಗೆರೆ, ಕೊಳ್ಳೇಗಾಲ ತಾಲ್ಲೋಕು |
| 26 | ಬ್ರದರನ್ ಚರ್ಚ್,<br>ಕಾಮಗೆರೆ, ಕೊಳ್ಳೇಗಾಲ ತಾಲ್ಲೋಕು |
| 27 | ಲೂಥರನ್ ಎಪಿಸಿಸಿ ಚರ್ಚ್<br>ಕಾಮಗೆರೆ, ಕೊಳ್ಳೇಗಾಲ ತಾಲ್ಲೋಕು |
| 28 | ಸೇಂಟ್ ಜೋಸೆಪ್ ಚರ್ಚ್<br>ಬಸವನಗುಡಿ, ಕೊಳ್ಳೇಗಾಲ ತಾಲ್ಲೋಕು |
| 29 | ಸಂಟ್ ಅಂಥೋನಿ ಚರ್ಚ್<br>ಕೌದಳ್ಳಿ, ಕೊಳ್ಳೇಗಾಲ ತಾಲ್ಲೋಕು |
| 30 | ಸೇಂಟ್ ಜೋಸೆಪ್ ಚರ್ಚ್<br>ವಡ್ಡರದೊಡ್ಡಿ, ಕೊಳ್ಳೇಗಾಲ ತಾಲ್ಲೋಕು |
| 31 | ಸೇಂಟ್ ಲೂರ್ದ್‌ಮೇರಿ ಚರ್ಚ್<br>ಮಾರ್ಟಳ್ಳಿ, ಕೊಳ್ಳೇಗಾಲ ತಾಲ್ಲೋಕು |
| 32 | ಸೇಂಟ್ ಪ್ರಾನ್ಸಿಸ್ ಚರ್ಚ್<br>ಜಲ್ಲಿಪಾಳ್ಯ, ಕೊಳ್ಳೇಗಾಲ ತಾಲ್ಲೋಕು |
| 33 | ಸೇಂಟ್ ಆ್ಯನ್ಸ್ ಚರ್ಚ್<br>ಸಂದನಪಾಳ್ಯ, ಕೊಳ್ಳೇಗಾಲ ತಾಲ್ಲೋಕು |
| 34 | ಯೇಸುವಿನ ಪವಿತ್ರ ಹೃದಯ ದೇವಾಲಯ<br>ವಡಕೆಹಳ್ಳಿ, ಕೊಳ್ಳೇಗಾಲ ತಾಲ್ಲೋಕು |